ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು
E-mail:commiss0069oner.pue@gmail.com. * Ph. No.23361857, 23361858* Fax-23361852

ಸಂಖ್ಯೆ:ಪಪೂಶಿ/ಶೈಶಾ/ದಾ.ಆಂ/2019-20 ದಿನಾಂಕ: 16 -07-2019

## ಸುತ್ತೋಲೆ

**ವಿಷಯ:** ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸಲು ದಾಖಲಾತಿ ಆಂದೋಲನ ಕೈಗೊಳ್ಳುವ ಬಗ್ಗೆ.

---

ಜುಲೈ 12 2019 ರಂದು ಎಸ್.ಎಸ್.ಎಲ್.ಸಿ.ಯ ಪೂರಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಒಟ್ಟಾರೆ ಫಲಿತಾಂಶ ಶೇ.42%ರಷ್ಟು ಆಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಎಸ್.ಎಸ್.ಎಲ್.ಸಿ. ಪೂರೈಸಿದ ಎಲ್ಲಾ ವಿದ್ಯಾರ್ಥಿ / ವಿದ್ಯಾರ್ಥಿನಿಯರು ತಮ್ಮ ಶಿಕ್ಷಣವನ್ನು ಮುಂದುವರೆಸುವಂತೆ ಕ್ರಮವಹಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಯಾವುದೇ ವಿದ್ಯಾರ್ಥಿಯು ಶಿಕ್ಷಣದಿಂದ ವಂಚಿತರಾಗದಂತೆ ಕ್ರಮವಹಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದೆ.

1) ಪ್ರತಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಅವರ ವ್ಯಾಪ್ತಿಯಡಿ ಬರುವ ಎಲ್ಲಾ ಪ್ರೌಢಶಾಲೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ವಿದ್ಯಾರ್ಥಿವಾರು ಸಂಗ್ರಹಿಸಿ ಇಟ್ಟುಕೊಳ್ಳುವುದು.

2) ಮೇಲಿನಂತೆ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಸದರಿ ವಿದ್ಯಾರ್ಥಿಯ ಪೋಷಕರನ್ನು ಸಂಪರ್ಕಿಸಿ, ವಿದ್ಯಾರ್ಥಿಯು ತಮ್ಮ ಕಾಲೇಜಿಗೆ ದಾಖಲಾಗಲು ಪ್ರೋತ್ಸಾಹಿಸುವುದು.

3) ಪೋಷಕರನ್ನು ಸಂಪರ್ಕಿಸಲು ವಿವಿಧ ಮಾಧ್ಯಮಗಳನ್ನು ಬಳಸಬಹುದು. ಕಾಲೇಜಿನಲ್ಲಿರುವ ಸಂಪನ್ಮೂಲ, ಸೌಲಭ್ಯ, ಸರ್ಕಾರದ ಯೋಜನೆಗಳು ಇತ್ಯಾದಿಗಳನ್ನು ಬಿಂಬಿಸುವಂತೆ ಆಕರ್ಷಣೀಯವಾದ ಕರಪತ್ರ, ದೂರವಾಣಿ ಸಂದೇಶ/ವಾಟ್ಸಾಪ್ ಸಂದೇಶ/ಫೇಸ್‌ಬುಕ್ ಮೂಲಕ ಅಭಿಯಾನವನ್ನು ಕೈಗೊಳ್ಳುವುದು. ಇದಕ್ಕಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಚಿತ ನಿಧಿಯಲ್ಲಿರುವ ಅನುದಾನದಲ್ಲಿ ಹಿಂದಿನ ಸಾಲಿನಂತೆ ರೂ.1,000/- ಮೊತ್ತಕ್ಕೆ ಮೀರದಂತೆ ವೆಚ್ಚವನ್ನು ಭರಿಸಬಹುದು.

4) ಸ್ಥಳೀಯ ಕೇಬಲ್ ಟಿವಿಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿರುವ ಸೌಲಭ್ಯ, ಕಾಲೇಜಿನಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ವಿವರ, ಶೇಕಡಾವಾರು ಫಲಿತಾಂಶ, ಇತ್ಯಾದಿ ವಿವರವನ್ನು ಬಿತ್ತರಿಸುವುದು.

5) ಕಾಲೇಜು ಬಿಟ್ಟ ವಿದ್ಯಾರ್ಥಿಗಳ/ನೂತನವಾಗಿ ದಾಖಿಲಾಗುವ ವಿದ್ಯಾರ್ಥಿಗಳ ಪೋಷಕರ ಮನೆ ಮನೆ ಭೇಟಿ ಕೈಗೊಳ್ಳುವುದು ಹಾಗೂ ಉಪನ್ಯಾಸಕರಿಗೆ ವಿದ್ಯಾರ್ಥಿಗಳನ್ನು ದತ್ತು ನೀಡುವ ಮೂಲಕ ವಿದ್ಯಾರ್ಥಿಗಳ ದಾಖಲಾತಿ, ಹಾಜರಾತಿ ಹಾಗೂ ಗುಣಮಟ್ಟ ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು.

6) ದಾಖಲಾತಿ ಆಂದೋಲವನ್ನು ಯಶಸ್ವಿಗೊಳಿಸಲು ಅಗತ್ಯ ಕಾರ್ಯಕ್ರಮವನ್ನು ರೂಪಿಸಲು ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿಯ ಸಭೆ ಕರೆದು, ಚರ್ಚಿಸಿ ಮುಂದುವರೆಯುವುದು.

7) ಉಪನಿರ್ದೇಶಕರು ಪ್ರತಿ ತಾಲ್ಲೂಕಿಗೆ ಹಿಂದಿನ ಸಾಲಿನಂತೆ ಒಬ್ಬ ಉತ್ತಮ ಪ್ರಾಂಶುಪಾಲರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ದಾಖಲಾತಿ ಆಂದೋಲನವು ಯಶಸ್ವಿಯಾಗುವಂತೆ ಕ್ರಮವಹಿಸುವುದು.

8) ದಾಖಲಾತಿ ಆಂದೋಲನ ಪರಿಣಾಮವಾಗಿ ಕಳೆದ ಶೈಕ್ಷಣಿಕ ಸಾಲಿಗಿಂತ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳದ ಕುರಿತು ಹಿಂದಿನ ಸಾಲಿನಂತೆ ವರದಿ ತಯಾರಿಸುವುದು. ಉತ್ತಮ ಪ್ರಕರಣಗಳನ್ನು ಪ್ರೋತ್ಸಾಹಿಸುವುದು ಮತ್ತು ಇಂತಹ ಸಾಧನೆ ಮಾಡಿದ ಪ್ರಾಂಶುಪಾಲರು/ಉಪನ್ಯಾಸಕರುಗಳ ಬಗ್ಗೆ ಅವರ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿ ಷರಾ ದಾಖಲಿಸುವುದು.

9) ಕಾಲೇಜುಗಳ ಪ್ರಾಂಶುಪಾಲರು ಸಿದ್ಧಪಡಿಸಿದ ಉತ್ತಮ ಕರಪತ್ರ, ವಿಡಿಯೋ ದಾಖಲೀಕರಣ ಇತ್ಯಾದಿ ಪ್ರಯತ್ನಗಳನ್ನು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಇತರೆ ಕಾಲೇಜುಗಳ ಪ್ರಾಂಶುಪಾಲರಿಗೆ ಹಾಗೂ ಈ ಕಛೇರಿಯ ಗಮನಕ್ಕೆ ತರುವುದು.

10) 2018–19ನೇ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಗೆ ಅಧಿಕ ಸಾಧನೆ ಮಾಡಿದ ಎರಡು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ವಿವರಗಳನ್ನು ಸಂಗ್ರಹಿಸುವುದು. ಅದೇ ರೀತಿ ಕ್ರೀಡೆ, ಬರವಣಿಗೆ, ಸಾಹಿತ್ಯ, ಸಮಾಜ ಸೇವೆಗಳಲ್ಲಿ ಉತ್ತಮ ಸಾಧನೆಗೈದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ವಿವರಗಳನ್ನು ಪಡೆಯುವುದು. ಈ ರೀತಿ ಪಡೆದ ಮಾಹಿತಿಯನ್ನು ಈ ಕಛೇರಿಯ ಶೈಕ್ಷಣಿಕ ಶಾಖೆಗೆ ಇ-ಮೇಲ್ ವಿಳಾಸವಾದ academic.pue@gmail.comಗೆ ಸೂಕ್ತ ಭಾವಚಿತ್ರಗಳ ಸಮೇತ ವರದಿ ಕಳುಹಿಸುವುದು. ಪರಿಶೀಲಿಸಿ, ಇಲಾಖಾ ವೆಬ್‌ಸೈಟ್‌ಗೆ ಅಳವಡಿಸಲಾಗುವುದು.

ii) 2018–19ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳಲ್ಲಿ ಜಿಲ್ಲೆಗೆ ಅಧಿಕ ಸಾಧನೆ ಮಾಡಿದ ತಲಾ ಇಬ್ಬರು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಭಾವಚಿತ್ರಗಳನ್ನು ಅವರು ಗಳಿಸಿದ ಅಂಕಗಳೊಂದಿಗಿನ ವಿವರಗಳನ್ನು ಶೈಕ್ಷಣಿಕ ಶಾಖೆಗೆ academic.pue@gmail.comಗೆ ಕಳುಹಿಸುವುದು ಸದರಿ ವಿವರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

2018–19ನೇ ಸಾಲಿನ ಪ್ರಥಮ ಪಿಯುಸಿ ಕಲಾ/ವಾಣಿಜ್ಯ/ವಿಜ್ಞಾನ ವಿಷಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಜಿಲ್ಲಾವಾರು ಸಂಖ್ಯೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು ಮತ್ತು ಪ್ರಾಂಶುಪಾಲರು 2019–20 ನೇ ಸಾಲಿನಲ್ಲಿ ಹಿಂದಿನ ವರ್ಷಕ್ಕಿಂತ ದಾಖಲಾತಿಯನ್ನು ಹೆಚ್ಚಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಿದೆ.

ಈ ಮೇಲ್ಕಂಡ ಎಲ್ಲಾ ಕ್ರಮಗಳನ್ನು ಕೈಗೊಂಡು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಸ.ಪ.ಪೂ.ಕಾಲೇಜುಗಳಲ್ಲಿ ದಾಖಲಾತಿ ಪಡೆಯಲು ಕ್ರಮತೆಗೆದುಕೊಂಡು ಸ.ಪ.ಪೂ.ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುವಂತೆ ನೋಡಿಕೊಳ್ಳುವುದು ಎಲ್ಲಾ ಪ್ರಾಂಶುಪಾಲರ ಹಾಗೂ ಉಪನ್ಯಾಸಕರ ಆದ್ಯ ಕರ್ತವ್ಯವಾಗಿರುತ್ತದೆ ಈ ಸಂಬಂಧ ಜಿಲ್ಲಾ ಉಪ ನಿರ್ದೇಶಕರೊಂದಿಗೆ ಚರ್ಚಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ದಾಖಲಾತಿ ಆಂದೋಲನವನ್ನು ಸಮರ್ಪಕವಾಗಿ ನಿರ್ವಹಿಸುವುದು.

ದಾಖಲಾತಿ ಆಂದೋಲನವು ಜುಲೈ 2ನೇ ವಾರದಿಂದ ಆಗಸ್ಟ್ 6 2019 ರವರಿಗೆ ಚಾಲಿಯಲ್ಲಿರುತ್ತದೆ. ಪ್ರಯುಕ್ತ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಸಕ್ರಿಯವಾಗಿ ಭಾಗಿಯಾಗಲು ತಿಳಿಸಿದೆ. ತಪ್ಪಿದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

<u>ಪ್ರತಿಯನ್ನು:</u>

1. ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಜಿಲ್ಲಾ ಉಪನಿರ್ದೇಶಕರ ಮೂಲಕ – ಮುಂದಿನ ಕ್ರಮಕ್ಕಾಗಿ.
3. ಇ–ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು, ಇವರಿಗೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

| 2018-19 IPUC DISTRICT WISE DETAILS | | | | | | |
|---|---|---|---|---|---|---|
| S NO | CODE | DISTRICT | ART | COMM | SCIENCE | Total |
| 1 | AN | BANGALORE NORTH | 3766 | 28123 | 18555 | 50444 |
| 2 | AS | BANGALORE SOUTH | 3978 | 32948 | 19695 | 56621 |
| 3 | BB | BANGALORE RURAL | 1874 | 5284 | 2124 | 9282 |
| 4 | BR | RAMNAGARA | 2896 | 4259 | 1903 | 9058 |
| 5 | CC | BELLARY | 9869 | 7701 | 7275 | 24845 |
| 6 | DC | CHIKODI | 12900 | 8028 | 6399 | 27327 |
| 7 | DD | BELGAUM | 9513 | 8972 | 5603 | 24088 |
| 8 | EB | BAGALKOTE | 10222 | 6075 | 6312 | 22609 |
| 9 | EE | BIJAPUR | 13214 | 4511 | 7421 | 25146 |
| 10 | FF | BIDAR | 4713 | 2793 | 8460 | 15966 |
| 11 | GD | DAVANAGERE | 8353 | 5728 | 8392 | 22473 |
| 12 | GG | CHITRADURGA | 6363 | 4859 | 4635 | 15857 |
| 13 | HH | CHICKAMAGALUR | 3402 | 3680 | 2521 | 9603 |
| 14 | JG | GADAG | 5808 | 3408 | 2474 | 11690 |
| 15 | JH | HAVERI | 7222 | 4874 | 2380 | 14476 |
| 16 | JJ | DHARWAD | 7149 | 8621 | 9779 | 25549 |
| 17 | KK | GULBARGA | 10380 | 5069 | 9599 | 25048 |
| 18 | KY | YADGIR | 2621 | 1005 | 1676 | 5302 |
| 19 | LL | HASSAN | 5290 | 6998 | 4972 | 17260 |
| 20 | MC | CHIKKABALLAPUR | 2001 | 6337 | 4291 | 12629 |
| 21 | MM | KOLAR | 2606 | 8113 | 4611 | 15330 |
| 22 | NC | CHAMARAJANAGAR | 2916 | 2748 | 1402 | 7066 |
| 23 | NN | MYSORE | 10413 | 13040 | 10840 | 34293 |
| 24 | PP | MANDYA | 4672 | 5717 | 4599 | 14988 |
| 25 | QQ | NORTH CANARA | 4355 | 6717 | 3680 | 14752 |
| 26 | RK | KOPPAL | 6775 | 3436 | 2514 | 12725 |
| 27 | RR | RAICHUR | 8862 | 4629 | 2798 | 16289 |
| 28 | SS | SOUTH CANARA | 4588 | 15826 | 13935 | 34349 |
| 29 | SU | UDUPI | 1846 | 8124 | 5239 | 15209 |
| 30 | TT | SHIMOGA | 6043 | 7494 | 6409 | 19946 |
| 31 | UU | TUMKUR | 7836 | 11624 | 8003 | 27463 |
| 32 | VV | KODAGU | 1655 | 3099 | 1207 | 5961 |
| | | Total | 194101 | 249840 | 199703 | 643644 |

for Director 1/7/2019
Dept. Of Pre University Education